**( ದಿನಾಂಕ: 07-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** Sri. KAP ವಕೀಲರಿಂದ ,

ಈ ದಾವೆಯನ್ನು ನಾವು ಜಮೀನುಗಳಲ್ಲಿ ಪಾಲು ಕೇಳಿ ಹಾಕಿರುತ್ತೇವೆ. ಈಗ ನಾವು ಅನಕಲ್ ಗ್ರಾಮದಲ್ಲಿ ಇರುತ್ತೇವೆ ಏಕೆಂದರೆ ಪ್ರತಿವಾದಿಯರು ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ನನ್ನ ಗಂಡ ದಿಃ 13.07.2006 ರಲ್ಲಿ ಸನಗುಂದ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ. ನನ್ನ ಗಂಡ ನನಗೆ ಹೆಣ್ಣು ಮಗು ಅದ ನಂತರ ತೀರಿಕೊಂಡಿರುತ್ತಾರೆ. ನನ್ನ ಗಂಡ ನನ್ನ ಮಗುವನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾವು 2006 ರಿಂದ 2025 ರವರೆಗೂ ಅನಕಲ್ ಗ್ರಾಮದಲ್ಲಿ ಇದ್ದಿರಾ ಎಂದರೆ ಸಾಕ್ಷಿ ಹೋಗಿ ಬಂದು ಮಾಡುತ್ತೇವೆ ಎಂದು ನುಡಿಯುತ್ತಾರೆ.

1 ಮತ್ತು 2 ನೇ ಪ್ರತಿವಾದಿಗಳು ನನಗೆ 2021 ರವರೆಗೂ ಖರ್ಚು ವೆಚ್ಚ ಕೊಟ್ಟಿರುತ್ತಾರೆ ತದ ನಂತರ ಕೊಟ್ಟಿಲ್ಲ. 1 ನೇ ಪ್ರತಿವಾದಿ ನನ್ನ ಮಾವ ಅತನಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಇರುತ್ತಾಳೆ. ಆ ಪೈಕಿ ನನ್ನ ಹಾಗೂ 5 ನೇ ವಾದಿ ಗಂಡ ಸೂರ್ಯಕಾಂತ ಇಬ್ಬರು ತೀರಕೊಂಡಿರುತ್ತಾರೆ. ಹೆಣ್ಣು ಮಗಳು ಈ ಪ್ರಕರಣದಲ್ಲಿ 3ನೇ ಪ್ರತಿವಾದಿಯಾಗಿರುತ್ತಾಳೆ. 5 ನೇ ವಾದಿ ಗಂಡ ಮಧ್ಯಪಾನ ಮಾಡಿ ಅವರಿಗೆ ಕ್ಯಾನ್ಸರ ಕಾಯಿಲೆ ಅಗಿತ್ತು. ಆದ್ದರಿಂದ ಅವರು ತೀರಿಕೊಂಡಿರುತ್ತಾರೆ.

5 ನೇ ವಾದಿ ಗಂಡ ಕಾಯಿಲೆಯಿಂದ ತೀರಿಕೊಂಡಿಲ್ಲ, ನಾನು ಮತ್ತು 5 ನೇ ವಾದಿ ಇಬ್ಬರು ಕೂಡಿಕೊಂಡು ಹೊಡಿ-ಬಡಿ ಮಾಡಿ ಅವರನ್ನು ಸಾಯಿಸಿರುತ್ತೇವೆ ಎಂದರೆ ಸರಿಯಲ್ಲ. 5 ನೇ ವಾದಿ ಮತ್ತು ಅವರ ಮಕ್ಕಳು ಅನಕಲ್ ಗ್ರಾಮದಲ್ಲಿ ಇರುತ್ತಾರೆ. ಏಕೆಂದರೆ ಪ್ರತಿವಾದಿಯರು ಅವರನ್ನು ಚೆನ್ನಾಗಿ ನೋಡಿಕೊಂಡಿರದೇ ಇರುವ ಕಾರಣ ಅವರು ಅಲ್ಲೆ ಇರುತ್ತಾರೆ. 5 ನೇ ವಾದಿ ಮತ್ತು ಅವಳ ಮಗ 3 ನೇ ವಾದಿ, 1 ಮತ್ತು 2 ನೇ ಪ್ರತಿವಾದಿಯರನ್ನು ಹೊಡಿ-ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಪಾಲಿನ ಸಲುವಾಗಿ ಸುಮಾರು ಬಾರಿ ಪಂಚಾಯಿತಿ ಅಗಿರುತ್ತದೆ ಅದರೆ ಪ್ರತಿವಾದಿಯರು ನಾವು ಇರುವವರೆಗೊ ಕೊಡುವುದಿಲ್ಲ ಎಂದು ಹೇಳಿರುತ್ತಾರೆ. ಈಗ ನಾವು ಅನಕಲ್ ಗ್ರಾಮದಲ್ಲಿ ನನ್ನ ತಂದೆ ತಾಯಿಯರ ಆದಾಯದಿಂದ ಬದುಕುತ್ತಿದ್ದೆವೆ. ನನ್ನ ತಂದೆ ತಾಯಿಗೆ 5 ಎಕರೆ ಜಮೀನು ಇರುತ್ತದೆ. ನನ್ನ ತಾಯಿ ಸುಮಾರು 9 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾರೆ. ನನ್ನ ತಾಯಿಯ ತವರು ಮನೆ ಆಸ್ತಿ 11 ಎಕರೆ ಇದೆ ಅದನ್ನು ಅವರು ಜೀವಂತ ಕಾಲಕ್ಕೆ ಮಾರಟ ಮಾಡಿರುತ್ತಾರೆ. ದಾವಾ ಸ್ವತ್ತುಗಳು ಒಟ್ಟು 32 ಎಕರೆ ಜಮಿಲನು ಇರುತ್ತದೆ. ಆ ಪೈಕಿ ಸರ್ವೇ ನಂ. 51 ರಲ್ಲಿ 4 ಎಕರೆ ಇರುತ್ತದೆ. ಸರ್ವೇ ನಂ. 2 ರಲ್ಲಿ 3 ಎಕರೆ ಇರುತ್ತದೆ ಮತ್ತು ಸರ್ವೇ ನಂ. 298 ರಲ್ಲಿ 28 ಎಕರೆ ಜಮೀನು ಇರುತ್ತದೆ. ದಾವಾ ಸ್ವತ್ತುಗಳು ಎಲ್ಲವು 1 ನೇ ಪ್ರತಿವಾದಿ ಹೆಸರಿನಲ್ಲಿ ಇಲ್ಲ, ಅವುಗಳು ನನ್ನ ಗಂಡನ ಹೆಸನಲ್ಲಿ 8 ಎಕರೆ ಜಮೀನು ಇದೆ. ನನ್ನ ಮೈದುನ ಅಂದರೆ 5 ನೇ ವಾದಿ ಗಂಡ ಸೂರ್ಯಕಾಂತ ಹೆಸರಿನಲ್ಲಿ 8 ಎಕರೆ ಜಮೀನು

ಇರುತ್ತದೆ. ಉಳಿದ ಜಮೀನು 1 ಮತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ನನ್ನ ಹಾಗೂ 5 ನೇ ವಾದಿ ಗಂಡ ಹೆಸರಿನಲ್ಲಿ ಇರುವ ಜಮೀನುಗಳ ಪಹಣಿಗಳನ್ನು ಪ್ರತಿವಾದಿಯರನ್ನು ಕೇಳಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡನ ಹೆಸರಿನಲ್ಲಿರುವ ಆಸ್ತಿಯ ಮೇಲೆ ನಾನು ನನ್ನ ಮಗಳ ಶಿಕ್ಷಣ ಸಲುವಾಗಿ 5 ಲಕ್ಷ ಸಾಲ ಪಡೆದುಕೊಂಡಿರುತ್ತೇನೆ. ಸದರಿ ಸಾಲವನ್ನು ಪ್ರತಿವಾದಿಯರನ್ನು ಕೇಳಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ B.Sc ಪದವಿ ಓದುತ್ತಿದ್ದಾಳೆ. ದಾವಾ ಸ್ವತ್ತುಗಳ ಚೆಕ್ ಬಂದಿ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ನೀಡಲಾಯಿತು.

ಮುಂದುವರೆದ ಪಾಟೀ ಸವಾಲಿಗೆಃ ಕೋರಿಕೆ ಮೇರೆಗೆ ಮುಂದುಡಲಾಯಿತು.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು, ಆಳಂದ**